Business arrangement of the House

MR SPEAKER.—We take up the discus ion on the demands for grants. There are 10 members in the list given by the Government Whip and 9 members from the Opposition side who wish to speak on the demands. We have to res rict the time.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಇವತ್ತು ಇಡೀ ದಿವಸ ಈ ಡಿಮ್ಯಾಂಡ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟು ನಾಳೆ ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಟ್ಟರೆ ಒಳ್ಳೆಯದಾಗುತ್ತದೆ. ಏಕೆಂದರೆ ಇನ್ನೂ ಬಹಳ ಮಂದಿ ಮಾನ್ಯ ಸದಸ್ಯರು ಈ ಡಿಮ್ಯಾಂಡ್ ಬಗ್ಗೆ ಮಾತನಾಡುವುದಕ್ಕೆ ಆಶಪಟ್ಟಿದ್ದಾರೆ.

MR SPEAKER.—We have to go according to the list.

SRI D DEVARAJ URS.—Let the debate go on; I shall reply to the debate tomorrow

MR. SPEAKER.—I shall go according to the list. No member should exceed the time.

SRI D. DEVARAJ URS.—I would like to make a suggestion. We have got the lists from both the sides Instead of 24 members trying to speak for 5 minutes or two minutes, it is better to cut down the list to 5 members on each side and time allotted accordingly so that the debate would be lively and interesting and at the same time discussion should be closed today. Otherwise, I am sure you will have the difficulty of allotting time to all the members who have given their names. If 10 minutes is allotted it would be 4 hours. According to the time available you cannot allot more than 10 minutes to each member. To avoid this, let both the Whips sit together and curtail the number so that some people might be given a little more time.

SRI A. LAKSHMISAGAR.—Every member who has made a request is anxious to speak.

SRI D. DEVARAJ URS.—Some of the members want to highlight their local problems. We cannot give time for all the 210 members to highlight their problems. I would put it this way; On many subjects the hon.members have been supplied with information; if there are any specific problem, I welcome them to write to the government or to me, I will see that action is taken. Even assuming that some problems have to be highlighted by the members, at the maximum till the end of the day it may come to 35-40 members. What about the 180 and odd members who had no chance at all.

SRI A. LAKSHMISAGAR.—The members have given their names at our instance, therefore, they will have to be given chance.

SRI D. DEVARAJ URS.—If he does not want to cut down the names in his list, then the time be allotted to both the sides. It is left to the Speaker to allot the time. We have got 4 hours. The Speaker can allot time to each member and put the limit on the time.

SRI B. B. SAYANAK.—We will stick to the time limit.

MR. SPEAKER.—Both the Whips can discuss amongst themselves and arrive at an agreed formula so far as timing is concerned.

BUDGET ESTIMATES FOR 1979-80

Demands for Grants Demand No. 4, 6, 23, 24, 31, 32, 35 to 41, 46, 47, and 62

(Debate Continued)

2.00 P.M.

† ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಹದಿನಾರು ಬೇಡಿಕೆಗಳು ಹಾಗೂ ಮಾನ್ಯ ಚಂದ್ರೇಗೌಡರು ಮಂಡಿಸಿರುವ ಒಂದು ಬೇಡಿಕೆಯನ್ನು ಸಮರ್ಥನೆ ಮಾಡುತ್ತೇನೆ. ಈ ಸಭೆ ಇವತ್ತು "ವಿಧಾನ ಸಭೆ" ಕಂಡ ಹಾಗೆ ಕಾಣುತ್ತಿದೆ. ಎಂದಿಗಿಂತ ಇಂದು ಹೆಚ್ಚಿನ ಸದಸ್ಯರು ಸಭೆಯಲ್ಲಿದ್ದಾರೆ. ಆರು ಜನ ಮಂತ್ರಿಗಳಿದ್ದಾರೆ. ಆದರೆ, ಮಹಿಳಾ ಸದಸ್ಯರೊಬ್ಬರೂ ಇಲ್ಲ. ಇಂದು ಇಲ್ಲಿ ಹೆಚ್ಚು ಸದಸ್ಯರಿರುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿರುವುದೇ ಕಾರಣ. ಅವರೊಂದು ಆಕರ್ಷಣೆ. ಬೇರೆ ದಿವಸ ಬೇಡಿಕೆಗೆ ಸಂಬಂಧಿಸಿದ ಮಂತ್ರಿಗಳು ಮಾತ್ರ ಇರುತ್ತಿದ್ದರು. ವಿಧುವೆಯಾದ ಮೇಲೆ ಹೆಣ್ಣು-ಗಂಡುಗಳು ವಿಧುಚಂದ್ರಕ್ಕೆ ಹೊರಟು ಹೋಗುವ ಹಾಗೆ, ಮಂತ್ರಿಗಳೂ ಸಹ ತಮ್ಮ ಬೇಡಿಕೆ ಮುಗಿದ ಮೇಲೆ ಮದುವೆಯಾಯಿತೆಂದು ತಿಳಿದು ವಿಧುಚಂದ್ರಕ್ಕೆ ಹೊರಟು ಹೋಗಿದ್ದಾರೆ !

ಶ್ರೀ ಮಳ್ಳೂರು ಆನಂದರಾವ್.—ಯಾರನ್ನಾದರೂ ಕರೆದುಕೊಂಡು ಹೋಗಿರುವರೆ !

ಶ್ರೀ ಗಟ್ಟಿ ಚಂದ್ರಶೇಖರ್.— ನನಗೇನು ಗೊತ್ತು ? ಅದಕ್ಕೆಲ್ಲ ನೀವು ಮಾಡ್ಕೊಂಡಿದ್ದೀರಲ್ಲ. ಮೈಸೂರಿನ ಅರಮನೆಯಲ್ಲಿ ಒಬ್ಬ ದೊಡ್ಡ ಸಂಗೀತಗಾರರಿದ್ದರು. ಮಹಾರಾಜರು ಬಂದು ಸಿಂಹಾಸನದಲ್ಲಿ ಕುಳಿತುಕೊಂಡ ತಕ್ಷಣ ಅವರು ಸಂಗೀತ ಪ್ರಾರಂಭ ಮಾಡಬೇಕಾಗಿತ್ತು. ಪಾಪ ! ಆ ಸಂಗೀತಗಾರ ಹುಟ್ಟು ಕುರುಡ; ಮಹಾರಾಜರು ಬಂದದ್ದು, ಸಿಂಹಾಸನ ಏರಿದ್ದು ಗೊತ್ತಾಗುತ್ತಿದ್ದಿಲ್ಲ. ಆದುದರಿಂದ, ಅದು ಅವನಿಗೆ ಗೊತ್ತಾಗಲೆಂದು ಚಿವುಟಿದಾಗ ಆತ ಸಂಗೀತ ಪ್ರಾರಂಭ ಮಾಡುತ್ತಿದ್ದ ! ಹಾಗೆಯೇ ವಿರೋಧ ಪಕ್ಷದವರಿದ್ದರೆ ನನಗೂ ಮಾತನಾಡಲಿಕ್ಕೆ ಚೆನ್ನಾಗಿರುತ್ತಿತ್ತು. ಆದರೆ, ಆದೇಕೋ ಸ್ಮಶಾನ ಸದೃಶವಾಗಿದೆ. ಕೆಲವರು ದೆಹಲಿಗೆ ಹೋಗಿದ್ದಾರೆ, ಮತ್ತೆ ಇಲ್ಲಿರುವವರು ಚಿಂತಾಕ್ರಾಂತರಾಗಿದ್ದಾರೆ. ಆದಕ್ಕಾಗಿ ನಾನು ವಿಷಾದಪಡುತ್ತೇನೆ. ಈ ಅಧಿವೇಶನದಲ್ಲಿ ನಾನು ಮೊದಲಬಾರಿಗೆ ಮಾತನಾಡುತ್ತಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳನ್ನು ಬಹಳ ಹೆಮ್ಮೆಯಿಂದ ಅಭಿನಂದಿಸುತ್ತೇನೆ. ಗ್ರೋವರ್ ಆಯೋಗದ ವಿಧಿಯ ಅಗ್ನಿಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪುಟವಿಟ್ಟ ಚಿನ್ನದಂತೆ ತೇಜೋಪುಂಜರಾಗಿ ಅವರು ಹೊರಬಂದಿದ್ದಾರೆ. ಅದಕ್ಕಾಗಿ ನಾವೆಲ್ಲರೂ ಸಂತೋಷಪಡೋಣ.

ಶ್ರೀ ಮಳ್ಳೂರು ಆನಂದರಾವ್.—ಇನ್ನೂ ಬಂದಿಲ್ಲ, ವರದಿ ಮಾತ್ರ ಹೊರಗೆ ಬಂದಿದೆ. ಅಪವಾದನೆಗಳು ಮಾತ್ರ ಹಾಗೆ ಇವೆ.

ಶ್ರೀ ಗಟ್ಟಿ ಚಂದ್ರಶೇಖರ್.— ಯಮಧರ್ಮರಾಯ ಬಂದಾಗಲೇ ನಿಮಗೆ ಗೊತ್ತಾಗುವುದು ! ಚಾಮುಂಡಿ ಬೆಟ್ಟದ ಮೇಲಿರುವವರು ನೀವು. ಭ್ರಷ್ಟಾಚಾರ ಆರೋಪದಿಂದ ಅವರು ಮುಕ್ತರಾಗಿದ್ದಾರೆ, ಅಗ್ನಿಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.